**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.684/2014**

**ಪಿ.ಡಬ್ಲ್ಯೂಃ 21**

**ಸಿ.ಡಬ್ಲ್ಯೂಃ 22**

**ಹೆಸರು** ಃ ಕೆ.ಟಿ.ರಮೇಶ್

ತಂದೆಯ **ಹೆಸರು** ಃ ತಮ್ಮಯ್ಯ

**ವಯಸ್ಸು** ಃ **39 ವರ್ಷ**

**ಉದ್ಯೋಗ** ಃ ಪೊಲೀಸ್ ಇನ್ಸಪೆಕ್ಟರ್, ಸಿಐಡಿ,

**ವಾಸಸ್ಥಳ** ಃ ಬೆಂಗಳೂರು

**ದಿನಾಂಕಃ 27-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ದಿಃ **26-02-2014** ರಿಂದ **04-05-2015** ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 15-03-2014 ರಂದು ಈ ಕೇಸಿನ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-6 ರಿಂದ 9 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ನಂತರ ಅನ್ಯ ಕರ್ತವ್ಯದ ಮೇರೆಗೆ ಠಾಣೆಯನ್ನು ಬಿಡಬೇಕಾಗಿದ್ದರಿಂದ ಈ ಕೇಸಿನ ತನಿಖೆಯನ್ನು ಚಾಸಾ-21 ರವರಿಗೆ ವಹಿಸಿರುತ್ತೇನೆ. ದಿಃ 26-03-2014 ರಂದು ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪುನಃ ಪಡೆದು ತನಿಖೆ ಮುಂದುವರಿಸಿ, ಸಾಕ್ಷಿದಾರರಾದ ಚಾಸಾ-10 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.

ದಿಃ 16-04-2014 ರಂದು 2 ನೇ ಆರೋಪಿಯ ಕರ್ತವ್ಯಗಳ ಬಗ್ಗೆ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೀಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತರೀಕೆರೆ ಹಾಗೂ ತಹಶೀಲ್ದಾರ್ ತರೀಕೆರೆಯವರಿಗೆ ಮನವಿ ಸಲ್ಲಿಸಿರುತ್ತೇನೆ. ಮಾನ್ಯ ತಹಶೀಲ್ದಾರ್ ರವರಿಗೆ ಅರಸೀಕೆರೆ ಗ್ರಾಮದ

ಸರ್ವೆ ನಂ.7/ಪಿ2 ರಲ್ಲಿನ ದಾಖಲಾತಿಗಳನ್ನು ನೀಡಲು ಮನವಿ ಸಲ್ಲಿಸಿರುತ್ತೇನೆ.

ದಿಃ 10-06-2014 ರಂದು ಈ ಪ್ರಕರಣದ 2ನೇ ಆರೋಪಿಯಾದ ರಾಮಯ್ಯನವರ ಮೇಲೆ ದೋಷರೋಪಾಣ ಪಟ್ಟಿಯನ್ನು ಸಲ್ಲಿಸಲು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರುರವರಿಗೆ ಅನುಮತಿ ನೀಡಲು ಮನವಿ ಸಲ್ಲಿಸಿರುತ್ತೇನೆ.

ದಿಃ 07-07-2014 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2ನೇ ಆರೋಪಿಗೆ ಸಂಬಂಧಿಸಿದಂತಹ ದಾಖಲಾತಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತರೀಕೆರೆ ಹಾಗೂ ತಹಶೀಲ್ದಾರ್ ತರೀಕೆರೆಯವರಿಂದ ದಾಖಲಾತಿಗಳನ್ನು ಸ್ವೀಕರಿಸಿರುತ್ತೇನೆ.

ದಿಃ 31-07-2014 ರಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಮಗಳೂರುವರು 2ನೇ ಆರೋಪಿಯ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಲು ಅನುಮತಿ ನೀಡಿದ್ದು ಅದನ್ನು ಸ್ವೀಕರಿಸಿ. ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ, 1 ಮತ್ತು 2ನೇ ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ 1 ಮತ್ತು 2ನೇ ಆರೋಪಿತರ ವಿರುದ್ದ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವಿಚಾರಣಾ ತನಿಖಾ ವರದಿಯಾಗಿದ್ದು , ಸದರಿ ದಾಖಲೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10 (ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದಿಃ 30-07-2014 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಚಿಕ್ಕಮಗಳೂರು ರವರು ಪೊಲೀಸ್ ಉಪನಿರೀಕ್ಷರು, ಲಕ್ಕವಳ್ಳಿ ಪೊಲೀಸ್ ಠಾಣೆಗೆ

ನೀಡಿದ ಮನವಿ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13 (ಬಿ) ಎಂದು ಗುರುತಿಸಲಾಯಿತು.

***ಪಾಟೀ ಸವಾಲು : 1ನೇ ಆರೋಪಿ ಪರ ಶ್ರೀ ಎ ಆರ್ ಕೆ ವಕೀಲರಿಂದ.***

ಈ ಪ್ರಕರಣದಲ್ಲಿ ನನ್ನ ಅಧೀನ ಅಧಿಕಾರಿಗಳು ಭಾಗಶಃ ತನಿಖೆಯನ್ನು ಮಾಡಿದ್ದಾರೆಂದರೆ ಸರಿ. ಮುಂದುವರಿದ ತನಿಖೆಯನ್ನು ನಾನು ಈ ಪ್ರಕರಣದಲ್ಲಿ ಮಾಡಿದ್ದೇನೆಂದರೆ ಸರಿ. ನನ್ನ ಅಧೀನ ಅಧಿಕಾರಿಗಳು ಈ ಪ್ರಕರಣದಲ್ಲಿ ಮಾಡಿದ ತನಿಖೆಯನ್ನು ನಾನು ಪುನಃ ಪರಿಶೀಲಿಸಿರುತ್ತೇನೆ. ಸದರಿ ವರದಿಯನ್ನು ತಮ್ಮ ತನಿಖಾ ವರದಿಯಲ್ಲಿ ಉಲ್ಲೇಖ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರಿದು ಸಿಡಿಯಲ್ಲಿ ಮಾಡಿದ್ದೇನೆಂದು ನುಡಿಯುತ್ತಾರೆ. ನಾನು ಈ ಪ್ರಕರಣದ ತನಿಖಾ ಕಾಲದಲ್ಲಿ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ತನಿಖಾ ಕಾಲದಲ್ಲಿ ತಾವೇನಾದರೂ ಆರೋಪಿಗಳನ್ನು ಕರೆಸಿ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಆರೋಪಿಗಳು ಸರ್ಕಾರಿ ಸ್ವತ್ತಿನಲ್ಲಿ ಸ್ವಾಧೀನ ಇರುವ ಬಗ್ಗೆ ಖಾತ್ರಿ ಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆಗಳ ಪ್ರಕಾರ ಮತ್ತು ಸಾಕ್ಷಿದಾರರ ಹೇಳಿಕೆ ಪ್ರಕಾರ ಖಾತ್ರಿಯಾಗಿದೆ ಎಂದು ನುಡಿಯುತ್ತಾರೆ. ತಾವು ಈ ಪ್ರಕರಣದಲ್ಲಿ ಯಾವ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೀರಿ ಎಂದರೆ ಸಾಕ್ಷಿಯು ತಹಶೀಲ್ದಾರ್ ಕಛೇರಿಯಿಂದ ಬಂದ ದಾಖಲಾತಿಗಳಾದ ರಾಜಸ್ವ ನಿರೀಕ್ಷಕರ ವರದಿ, ಗ್ರಾಮ ಲೆಕ್ಕಾಧಿಕಾರಿಗಳ ವರದಿ ಮತ್ತು ಸರ್ವೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ನಾನು ಸ್ವೀಕರಿಸಿದ ರೆವಿನ್ಯೂ ದಾಖಲಾತಿಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಾನು ಯಾವುದೇ ದಾಖಲಾತಿಗಳನ್ನು ಸ್ವೀಕರಿಸದೇ ಇದ್ದರೂ ಸಹ ತರೀಕೆರೆ ತಹಶೀಲ್ದಾರ್ ರವರ ಮಾತನ್ನು ಕೇಳಿ ಆರೋಪಿತರ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. *1*ನೇ ಆರೋಪಿಯು ತರೀಕೆರೆ ತಹಶೀಲ್ದಾರ್ ಕಛೇರಿಗೆ ನನಗೆ ಈ ಪ್ರಕರಣದ ವಿವಾದಿತ ಜಾಗವನ್ನು ಮಂಜೂರು ಮಾಡುವಂತೆ ಏನಾದರೂ ಮನವಿ ಕೊಟ್ಟಿದ್ದಾರ ಎಂದರೆ ಸಾಕ್ಷಿ ನಾನು ಅದನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. *1*ನೇ ಆರೋಪಿಯು ಸರ್ಕಾರಿ ಸ್ವತ್ತಿನಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ತರೀಕೆರೆ ತಹಶೀಲ್ದಾರ್ ಕಛೇರಿಗೆ ಯಾವುದೇ ಮನವಿ

ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ *1*ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. *1*ನೇ ಆರೋಪಿ ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ *1*ನೇ ಆರೋಪಿಯ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

***ಪಾಟೀ ಸವಾಲು : 2ನೇ ಆರೋಪಿ ಪರ ಶ್ರೀ ಕೆ ಸಿ ವಕೀಲರಿಂದ.***

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಂಜೂರು ಮಾಡಿರುವ ಸ್ವತ್ತುಗಳು *2*ನೇ ಆರೋಪಿಯ ಅಧಿಕಾರ ಅವಧಿಯಲ್ಲಿ ಆಗಿದೆಯೆ ಅಥವಾ ಹಿಂದೆ ಆಗಿದೆಯೇ ಎಂದರೆ ಸಾಕ್ಷಿಯು *2*ನೇ ಆರೋಪಿಯ ಅಧಿಕಾರ ಅವಧಿಯಲ್ಲಿ ಆಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. *2*ನೇ ಆರೋಪಿಯು ತಾತ್ಕಲಿಕವಾಗಿ ಬಾವಿಕೆರೆಯ ಗ್ರಾಮ ಪಂಚಾಯಿತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. *2*ನೇ ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ಆತನ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***